## ಕರ್ನಾಟಕ ಸರ್ಕಾರದ ನಡವಳಿ

ವಿಷಯ: 2013–14ನೇ ಸಾಲಿನಲ್ಲಿ ಜಿಲ್ಲಾ ವಲಯ ಕಾರ್ಯಕ್ರಮದಡಿ ಲೆಕ್ಕಶೀರ್ಷಿಕೆ 2515–00–102–0–65 (2515–00–197–1–22) SDP ಅಡಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ಹಿಂದುಳಿದ ತಾಲ್ಲೂಕುಗಳಲ್ಲಿ ಅಂಗನವಾಡಿ ಕೇಂದ್ರಗಳ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ.– ಮಾರ್ಗಸೂಚಿ.

ಪ್ರಸ್ತಾವನೆ:

1. 2013–14ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 2515–00–102–0–65 (2515–00–197–1–22) SDP ಅಡಿಯಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಉನ್ನತ ಮಟ್ಟದ ಸಮಿತಿಯಿಂದ ಗುರುತಿಸಲ್ಪಟ್ಟ ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಅಭಿವೃದ್ಧಿ ಕಾರ್ಯಕ್ರಮ-ಇದಕ್ಕಾಗಿ ಜಿಲ್ಲಾವಾರು ರೂ.4444.00 ಲಕ್ಷಗಳನ್ನು ತಾಲ್ಲೂಕು ಪಂಚಾಯತಿಗಳಿಗೆ ಒದಗಿಸಲಾಗಿದೆ. ಸದರಿ ಅನುದಾನವನ್ನು ಆರ್ಥಿಕ ಇಲಾಖೆಯು ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡುತ್ತದೆ.

2. ಡಾ: ನಂಜುಂಡಪ್ಪ ವರದಿಯ ಅನುಸಾರ 114 ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳಾಗಿದ್ದು, ಈ ತಾಲ್ಲೂಕುಗಳ 381 ಅಂಗನವಾಡಿ ಕೇಂದ್ರಗಳು ಸ್ವಂತ ನಿವೇಶನವನ್ನು ಹೊಂದಿರುತ್ತವೆ. ಪ್ರತಿ ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ರೂ. 12.00 ಲಕ್ಷದಂತೆ ಅನುದಾನ ನಿಗದಿಪಡಿಸಬಹುದಾಗಿದ್ದು, ಒಟ್ಟು 381 ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಾಣ ಮಾಡಲು ರೂ. 4572.00 ಲಕ್ಷಗಳ ಅನುದಾನದ ಅವಶ್ಯಕತೆ ಇರುತ್ತದೆ. ಎಸ್‌ಡಿಪಿ ಕಾಮಗಾರಿಗಳಡಿ ರೂ. 4444.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ರೂ. 128.00 ಲಕ್ಷಗಳ ಅನುದಾನದ ಅವಶ್ಯಕತೆ ಇದ್ದು, ಸದರಿ ಅನುದಾನವನ್ನು ತಾಲ್ಲೂಕು ಪಂಚಾಯಿತಿಗಳಿಗೆ ವಾರ್ಷಿಕವಾಗಿ ಬಿಡುಗಡೆ ಮಾಡುವ ರೂ. 1.00 ಕೋಟಿ ಅಭಿವೃದ್ಧಿ ಅನುದಾನದಲ್ಲಿ ಕೊರತೆಯಾಗುವ ಅನುದಾನವನ್ನು ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಗಳು ಬಳಸಿಕೊಳ್ಳುವಂತೆ ತಾಲ್ಲೂಕು ಪಂಚಾಯಿತಿಗಳಿಗೆ ನಿರ್ದೇಶನ ನೀಡಬಹುದಾಗಿದೆ.

3. 381 ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಾಣ ಮಾಡಲು ಆಯವ್ಯಯ ಲಿಂಕ್ ಡಾಕ್ಯುಮೆಂಟ್‌ನಲ್ಲಿ ತಾಲ್ಲೂಕುಗಳಿಗೆ ಒದಗಿಸಿದ ಜಿಲ್ಲಾವಾರು ಅನುದಾನ ರೂ. 4444.00 ಲಕ್ಷಗಳು ಮತ್ತು ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಾಣ ಮಾಡಲು ಕೊರತೆಯಾಗುವ ರೂ. 128.00 ಲಕ್ಷಗಳ ಅನುದಾನವನ್ನು ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಗಳು ತಾಲ್ಲೂಕು ಪಂಚಾಯಿತಿಗಳಿಗೆ ವಾರ್ಷಿಕವಾಗಿ ಬಿಡುಗಡೆಯಾಗುವ ರೂ. 1.00 ಕೋಟಿ ಅಭಿವೃದ್ಧಿ ಅನುದಾನದಲ್ಲಿ ಒದಗಿಸಿಕೊಳ್ಳಲು ಮತ್ತು 381 ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಾಣ ಮಾಡಲು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾವಾರು ಗುರಿ ನಿಗದಿಪಡಿಸಿಕೊಂಡು ಅದರ ಆಧಾರದ ಮೇಲೆ ತಾಲ್ಲೂಕುವಾರು ಗುರಿ ಹಂಚಿಕೆ ನೀಡಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 185 ಗ್ರಾಪಂಅ 2013, ಬೆಂಗಳೂರು, ದಿನಾಂಕ: 5.10.2013.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 381 ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಾಣ ಮಾಡಲು ಆಯವ್ಯಯ ಲಿಂಕ್ ಡಾಕ್ಯುಮೆಂಟ್‌ನಲ್ಲಿ ತಾಲ್ಲೂಕುಗಳಿಗೆ ಒದಗಿಸಿದ ಜಿಲ್ಲಾವಾರು ಅನುದಾನ ರೂ. 4444.00 ಲಕ್ಷಗಳು ಮತ್ತು ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಾಣ ಮಾಡಲು ಕೊರತೆಯಾಗುವ ರೂ. 128.00 ಲಕ್ಷಗಳ ಅನುದಾನವನ್ನು ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಗಳು ವಾರ್ಷಿಕವಾಗಿ ಬಿಡುಗಡೆಯಾಗುವ ರೂ. 1.00 ಕೋಟಿ ಅಭಿವೃದ್ಧಿ ಅನುದಾನದಲ್ಲಿ ಒದಗಿಸಿಕೊಳ್ಳಲು ಮತ್ತು 381 ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಾಣ ಮಾಡಲು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾವಾರು ಗುರಿ ನಿಗದಿಪಡಿಸಿಕೊಂಡು ಅದರ ಆಧಾರದ ಮೇಲೆ ತಾಲ್ಲೂಕುವಾರು ಗುರಿ ಹಂಚಿಕೆ ನೀಡಲು ಅನುಬಂಧ-1 ರಲ್ಲಿರುವಂತೆ ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

### 1. ಕಾಮಗಾರಿಗಳ ಆಯ್ಕೆ:

(1) ಈ ಕಾರ್ಯಕ್ರಮದಡಿ ಜಿಲ್ಲಾವಾರು ತಾಲ್ಲೂಕುಗಳಿಗೆ ನಿಗದಿಪಡಿಸಿದ ಅನುದಾನದ ಮಿತಿಯೊಳಗೆ ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಾಣ ಮಾಡಿಕೊಳ್ಳಲು ಕಾಮಗಾರಿ ಆಯ್ಕೆ ಮಾಡಿಕೊಳ್ಳುವುದು.

(2) ಆಯ್ಕೆ ಮಾಡುವ ಎಲ್ಲಾ ಕಾಮಗಾರಿಗಳಿಗೆ ವಿವರವಾದ ಯೋಜನಾ ವರದಿಗಳನ್ನು ಮತ್ತು ಅಂದಾಜು ಪಟ್ಟಿಗಳನ್ನು ತಯಾರಿಸಬೇಕು.

(3) ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಮಾರ್ಗಸೂಚಿ ಹೊರಡಿಸಿದ 15 ದಿನಗಳೊಳಗಾಗಿ ತಾಲ್ಲೂಕು ಪಂಚಾಯತಿಗಳು ತಯಾರಿಸಿ ಜಿಲ್ಲಾ ಪಂಚಾಯತಿಯಿಂದ ಅನುಮೋದನೆ ಪಡೆದುಕೊಳ್ಳತಕ್ಕದ್ದು. ರೂ.1.00ಕೋಟಿವರೆಗಿನ ತಾಲ್ಲೂಕು ಪಂಚಾಯತಿ ಕ್ರಿಯಾ ಯೋಜನೆಗೆ CEO, ಜಿ.ಪಂ ರವರು ಅನುಮೋದನೆ ನೀಡುವುದು.

(4) CEO ರವರಿಂದ ಅನುಮೋದಿತವಾದ ಕ್ರಿಯಾ ಯೋಜನೆ ಪ್ರತಿಯನ್ನು ತಪ್ಪದೆ ಯೋಜನಾ ಇಲಾಖೆಯ ಡಾ: ಡಿ.ಎಂ. ನಂಜುಂಡಪ್ಪ ಉಸ್ತುವಾರಿ ಕೋಶ ಇವರಿಗೆ ಸಲ್ಲಿಸತಕ್ಕದ್ದು.

### 2. ಕಾಮಗಾರಿಗಳ ಅನುಷ್ಠಾನ :

ಆಯವ್ಯಯ ಕಾರ್ಯಕ್ರಮದ ಅನುಷ್ಠಾನವನ್ನು ಜಿಲ್ಲಾ/ತಾಲ್ಲೂಕು ಪಂಚಾಯ್ತಿಯ ಉಸ್ತುವಾರಿಯಡಿಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ನೆರವೇರಿಸತಕ್ಕದ್ದು.

### 3. ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮಗಳನ್ವಯ ಕೈಗೊಳ್ಳುವುದು ಕಡ್ಡಾಯವಾಗಿದೆ.

### 4. ಅನುದಾನ ಬಿಡುಗಡೆ :

1. ಪ್ರಸ್ತುತ 2013-14ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ-2515ರಡಿ ಲಿಂಕ್ ಡಾಕ್ಯುಮೆಂಟ್‌ನಲ್ಲಿ ಒದಗಿಸಿರುವ ಅನುದಾನವನ್ನು ಆರ್ಥಿಕ ಇಲಾಖೆಯಿಂದ ನೇರವಾಗಿ ಬಿಡುಗಡೆಗೊಳಿಸಲಾಗುವುದು.

2. ಬಿಡುಗಡೆಯಾದ ಅನುದಾನಕ್ಕೆ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳ ಹಣ ಬಳಕೆ ಪ್ರಮಾಣಗಳನ್ನು ಪತ್ರ ಹಾಗೂ ಆಡಿಟ್ ವರದಿಯನ್ನು ಯೋಜನಾ ಇಲಾಖೆಗೆ ಮತ್ತು ಸರ್ಕಾರಕ್ಕೆ ಸಲ್ಲಿಸುವುದು.

5. **ಜಿಲ್ಲಾ ಪಂಚಾಯತಿ ಉಸ್ತುವಾರಿ :**

1. ತಾಲ್ಲೂಕು ಪಂಚಾಯತಿ ಕಾರ್ಯಕ್ರಮದ ಕಾಮಗಾರಿಗಳನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳು ಉಸ್ತುವಾರಿ ಕಾರ್ಯ ಮಾಡತಕ್ಕದ್ದು. ಈ ಕಾರ್ಯಕ್ರಮದಡಿ ಗುತ್ತಿಗೆದಾರರಿಗೆ ಮುಂಗಡ ಹಣವನ್ನು ಪಾವತಿ ಮಾಡತಕ್ಕದ್ದಲ್ಲ.
2. ಕಾಮಗಾರಿ ಆರಂಭವಾಗುವುದಕ್ಕೆ ಮುಂಚೆ, ಆರಂಭವಾದ ನಂತರ ಹಾಗೂ ಪೂರ್ಣಗೊಂಡ ನಂತರ ಮೂರು ಹಂತಗಳಲ್ಲಿ ಛಾಯಾ ಚಿತ್ರಗಳನ್ನು ತೆಗೆದು ಕಡತದಲ್ಲಿ ದಾಖಲಿಸಬೇಕು.
3. ಮಾಹಿತಿ ಹಕ್ಕು ನಿಯಮಗಳ ಪ್ರಕಾರ ಕಾಮಗಾರಿ ಅನುಷ್ಠಾನವಾಗುವ ಸ್ಥಳದಲ್ಲಿ ಕಾಮಗಾರಿಯ ಹೆಸರು, ಅಂದಾಜು ವೆಚ್ಚ, ನಿಗದಿಪಡಿಸಿದ ಸಮಯ, ಆರಂಭದ ದಿನಾಂಕ, ಟೆಂಡರ್‌ನ ಮೊಬಲಗು, ಟೆಂಡರ್‌ದಾರನ ಹೆಸರು, ವಿಳಾಸವನ್ನು ನಮೂದಿಸಲಾದ ಫಲಕವನ್ನು ಸ್ಥಾಪಿಸಬೇಕು.
4. ಪ್ರಗತಿ ವರದಿಯನ್ನು ಸರ್ಕಾರಕ್ಕೆ ಪ್ರತಿ ತಿಂಗಳು ವೆಬ್‌ಸೈಟ್‌ನಲ್ಲಿ ತುಂಬುವ ಮೂಲಕ ಮತ್ತು ಇ-ಮೇಲ್ ಮೂಲಕ ಸಲ್ಲಿಸತಕ್ಕದ್ದು.
5. ಪ್ರಸ್ತುತ ಈ ಲೆಕ್ಕಶೀರ್ಷಿಕೆಯಡಿ ತಾಲ್ಲೂಕು ಪಂಚಾಯತಿಗಳು ಅನುಷ್ಠಾನಗೊಳಿಸಿರುವ ಕಾಮಗಾರಿಗಳನ್ನು workssoft works monitoring ಪದ್ಧತಿ ಮುಖಾಂತರ ಉಸ್ತುವಾರಿ ಮಾಡಬೇಕಾಗಿದ್ದು, ಈ ಸಂಬಂಧ ಪೂರ್ಣ ಮಾಹಿತಿಯನ್ನು worksoft website ನಲ್ಲಿ ತಪ್ಪದೆ ಅಳವಡಿಸತಕ್ಕದ್ದು. ಈ ಮಾಹಿತಿಯನ್ನು website ನಲ್ಲಿ ಅಳವಡಿಸದಿದ್ದಲ್ಲಿ, ಮುಂದಿನ ಅನುದಾನ ತಡೆಹಿಡಿಯಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

5/10/13

(ಕೆ. ಯಾಲಕ್ಕಿಗೌಡ)
ನಿರ್ದೇಶಕರು (ಪಂ.ರಾಜ್) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿಯನ್ನು :

1. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಕಟ್ಟಡ, ಶೇಷಾದ್ರಿಪುರಂ, ಬೆಂಗಳೂರು-560020.
3. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಇಂಜಿನಿಯರ್ ರವರಿಗೆ
4. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್ ರವರಿಗೆ.

5. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
6. ಸರ್ಕಾರದ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
7. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ಆಯವ್ಯಯ ಮತ್ತು ಸಂಪನ್ಮೂಲ) ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು-ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಪಂ.ರಾ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

<u>ಅನುಬಂಧ-1</u>

**2515-00-102-0-65 (2515-00-197-1-22) ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿ ಗುರುತಿಸಿರುವ ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಕಾಮಗಾರಿಗಳಡಿ (SDP) ಅಂಗನವಾಡಿಗಳಿಗೆ ಕಟ್ಟಡನಿರ್ಮಾಣ ಮಾಡುವ ಬಗ್ಗೆ**

ರೂ. ಲಕ್ಷಗಳಲ್ಲಿ

| ಕ್ರಮ ಸಂಖ್ಯೆ | ಜಿಲ್ಲಾ ಪಂಚಾಯತಿ ಹೆಸರು | 2013 ಆಯ-ವ್ಯಯ ಸಾಲಿಗೆ ನಿಗದಿಪಡಿಸಿದ ಅನುದಾನ | ಪ್ರತಿ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ರೂ. 12.00 ಲಕ್ಷಗಳಂತೆ ನಿರ್ಮಾಣ ಮಾಡಬೇಕಾಗಿರುವ ಒಟ್ಟು ಅಂಗನವಾಡಿಗಳ ಸಂಖ್ಯೆ | ಒಟ್ಟು ಅವಶ್ಯಕತೆ ಇರುವ ಅನುದಾನ | ಎಸ್‌ಡಿಪಿ ಅನುದಾನದಲ್ಲಿ ಒದಗಿಸಿರುವ ಮೊತ್ತ | ತಾಲ್ಲೂಕು ಪಂಚಾಯಿತಿ ಅಭಿವೃದ್ಧಿ ಅನುದಾನದಲ್ಲಿ ಒದಗಿಸಿಕೊಳ್ಳಬೇಕಾಗಿರುವ ಉಳಿಕೆ ಅನುದಾನದ ಮೊತ್ತ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಬೆಂಗಳೂರು(ನ) | 20.88 | 2 | 24.00 | 20.88 | 3.12 |
| 2 | ಬೆಂಗಳೂರು(ಗ್ರಾ) | 6.27 | 1 | 12.00 | 6.27 | 5.73 |
| 3 | ಬೆಳಗಾಂ | 148.85 | 13 | 156.00 | 148.85 | 7.15 |
| 4 | ಬಳ್ಳಾರಿ | 220.55 | 19 | 228.00 | 220.55 | 7.45 |
| 5 | ಬೀದರ್ | 262.45 | 22 | 264.00 | 262.45 | 1.55 |
| 6 | ಬಿಜಾಪುರ | 302.02 | 26 | 312.00 | 302.02 | 9.98 |
| 7 | ಚಿಕ್ಕಮಗಳೂರು | 72.46 | 6 | 72.00 | 72.46 | -0.46 |
| 8 | ಚಿತ್ರದುರ್ಗ | 179.6 | 15 | 180.00 | 179.6 | 0.40 |
| 9 | ದಕ್ಷಿಣಕನ್ನಡ | 0 | 0 | 0.00 | 0 | 0.00 |
| 10 | ಧಾರವಾಡ | 47.46 | 4 | 48.00 | 47.46 | 0.54 |
| 11 | ಗುಲ್ಬರ್ಗಾ | 522.67 | 44 | 528.00 | 522.67 | 5.33 |
| 12 | ಯಾದಗಿರಿ | 222.75 | 19 | 228.00 | 222.75 | 5.25 |
| 13 | ಹಾಸನ | 101.44 | 9 | 108.00 | 101.44 | 6.56 |
| 14 | ಕೊಡಗು | 0 | 0 | 0.00 | 0 | 0.00 |
| 15 | ಕೋಲಾರ | 52.21 | 5 | 60.00 | 52.21 | 7.79 |
| 16 | ಮಂಡ್ಯ | 159.4 | 14 | 168.00 | 159.4 | 8.60 |
| 17 | ಮೈಸೂರು | 185.97 | 16 | 192.00 | 185.97 | 6.03 |
| 18 | ರಾಯಚೂರು | 330.82 | 28 | 336.00 | 330.82 | 5.18 |
| 19 | ಶಿವಮೊಗ್ಗ | 54.3 | 5 | 60.00 | 54.3 | 5.70 |
| 20 | ತುಮಕೂರು | 369.64 | 31 | 372.00 | 369.64 | 2.36 |
| 21 | ಉತ್ತರ ಕನ್ನಡ | 88.45 | 8 | 96.00 | 88.45 | 7.55 |
| 22 | ಚಾಮರಾಜನಗರ | 147.33 | 13 | 156.00 | 147.33 | 8.67 |
| 23 | ದಾವಣಗೆರೆ | 175.42 | 15 | 180.00 | 175.42 | 4.58 |
| 24 | ಬಾಗಲಕೋಟೆ | 120.81 | 10 | 120.00 | 120.81 | -0.81 |
| 25 | ಗದಗ | 66.88 | 6 | 72.00 | 66.88 | 5.12 |
| 26 | ಹಾವೇರಿ | 114.34 | 10 | 120.00 | 114.34 | 5.66 |
| 27 | ಉಡುಪಿ | 0 | 0 | 0.00 | 0 | 0.00 |
| 28 | ಕೊಪ್ಪಳ | 218.34 | 19 | 228.00 | 218.34 | 9.66 |
| 29 | ರಾಮನಗರ | 108.59 | 9 | 108.00 | 108.59 | -0.59 |
| 30 | ಚಿಕ್ಕಬಳ್ಳಾಪುರ | 144.1 | 12 | 144.00 | 144.1 | -0.10 |
| | ಒಟ್ಟು | **4444.00** | **381** | **4572.00** | **4444.00** | **128.00** |

ನಿರ್ದೇಶಕರು (ಪಂ. ರಾಜ್)
5/10/13